

**ಆತ್ಮಕಥನವು ಸೂಕ್ತ ಪ್ರಕಾರವಲ್ಲವೇ?**

ಆತ್ಮಚರಿತ್ರೆ ಬರೆವ ವಿಚಾರ ಇಲ್ಲ. ನೆನಪಿನ ಕಥನ ಅಥವಾ ಅನುಭವ ಕಥನ ಬರೆಯಬಹುದು. ಕೆಲಸದ ಅನುಭವಗಳು, ಒಡನಾಟಗಳು ಇವೆಲ್ಲ. ಅದಕ್ಕೂ ಸಾಮಾಜಿಕ ಸಾಂಸ್ಕೃತಿಕ ಮಹತ್ವವಿರುತ್ತದೆ. ಆದರೆ ಆತ್ಮಕಥನವೆಂದಾಗ ನನಗನಿಸುವುದು ನಾವು ಆತ್ಮವಂಚನೆ ಮಾಡಿಕೊಳ್ಳಬಾರದು. ಹಾಗೆ ನಮಗೆ ಎಲ್ಲ ಸತ್ಯಗಳನ್ನೂ ಬರೆಯಲು ಸಾಧ್ಯವಾಗುವುದಿಲ್ಲ. ಆ ಕೆಲವು ವಿಷಯಗಳು ಇನ್ನೂ ಸೋಷಿಯಲ್ ಟ್ಯಾಬೂಗಳೇ ಆಗಿವೆ. ಅದನ್ನು ಕುಟುಂಬದೊಳಗಿದ್ದು ಮೀರಲಾಗುವುದಿಲ್ಲ. ಅಥವಾ ಕೆಲವರು ಮಾಡಿದಂತೆ ಆತ್ಮಸ್ತುತಿ ಮಾಡಿಕೊಳ್ಳುವುದು, ಅತಿ ರಂಜಿತವಾಗಿ ಅವಾಸ್ತವವನ್ನು ಚಿತ್ರಿಸುವುದು ಕೂಡ ಆತ್ಮದ್ರೋಹವೇ.

◆ **ಹೆಣ್ಣಿನ ವ್ಯಕ್ತಿವಿಶಿಷ್ಟ ಧ್ವನಿಯನ್ನು ನಿಮ್ಮ ಕಥೆಗಳು ಧೈರ್ಯವಾಗಿ ಕೇಳಿಸಿದವು. ಅದಾಗಿ ಅರ್ಧ ಶತಮಾನವೇ ಕಳೆದಿದೆ. ಈಗಲೂ ಇಂಥ ದಿಟ್ಟ ಅಭಿವ್ಯಕ್ತಿಗಳ ಮೇಲೆ ದಾಳಿಯಾಗುತ್ತಿದೆಯಲ್ಲ...**

ಒಂದು ಇಡೀ ಸಮುದಾಯ ಈಗ ಹೆಣ್ತನದ ಪರಿಕಲ್ಪನೆಯನ್ನು, ಹೆಣ್ಣಿನ ಸಂಸ್ಕೃತಿಯನ್ನು ನಿರ್ಧರಿಸುತ್ತಿದೆ. ಉದಾಹರಣೆಗೆ, ಹಿಂದುತ್ವದ ಹೆಸರಿನಲ್ಲಿ ಹೆಣ್ಣಿನ ಮೇಲಾಗುವ ಭಯೋತ್ಪಾದನೆ. ಸಂಸ್ಕೃತಿ ರಕ್ಷಣೆಯ ಹೆಸರಿನಲ್ಲಿ ಹೇರುತ್ತಿರುವ ಒತ್ತಡ. ಇಲ್ಲೆಲ್ಲ ವ್ಯಕ್ತಿವಿಶಿಷ್ಟ ಧ್ವನಿಗಳಿಗೆ ಪ್ರಕಟವಾಗಲು ಅವಕಾಶವಿಲ್ಲ. ಭಯದ ವಾತಾವರಣವನ್ನು ಕೆಲವು ಸಮೂಹಗಳು, ಐಡಿಯಾಲಜಿಗಳು ಉಂಟು ಮಾಡುತ್ತಿವೆ. ದೈಹಿಕ ಹಲ್ಲೆಗಳಂತೂ ನಾವು ಮತ್ತೆ ಹಳೆಯ ಬರ್ಬರ ದಿನಗಳಿಗೆ ಮರಳುತ್ತಿದ್ದೇವೆಯೇ ಎಂದೆನಿಸುವಂತೆ ಮಾಡುತ್ತಿದೆ. ಹೊರಗೆ ಹೋದ ಹೆಣ್ಣು ಮನೆಗೆ ಬರುವುದು ತಡವಾದರೆ ಆತಂಕ ಪಡುವ ಸಮಾಜದಲ್ಲಿ ಇನ್ನೆಷ್ಟು ದಿನ ಸ್ವಾತಂತ್ರ್ಯಕ್ಕಾಗಿ ಕಾಯುವುದು? ಮನುಷ್ಯ ಮೃಗವಾದರೆ, ಪಶುವಿನಂತೆ ವರ್ತಿಸಿದರೆ ಮಹಿಳೆ ಮನುಷ್ಯಳಾಗಿ ಅಂಥವನ ಜೊತೆ ಬದುಕುವುದು ಹೇಗೆ? ಹೆಣ್ಣು ತನ್ನನ್ನು ತಾನು ರಕ್ಷಿಸಿಕೊಳ್ಳಲು ಕಲಿಯಬೇಕು. ತನ್ನ ಅರಿವನ್ನು ಕಾಪಿಟ್ಟುಕೊಳ್ಳಬೇಕು. ಈಗಿನ ಹಲವು ಹಿಂಸೆಗಳು ರಾಜಕೀಯಪ್ರೇರಿತ ಸ್ಥಿತಿಯಲ್ಲಿವೆ. ಹೇಗಾದರೂ ಇದನ್ನು ತಡೆಯಬೇಕೆನ್ನಿಸುವುದು... ಒಮ್ಮೊಮ್ಮೆ ಮಾನಸಿಕ ಶಾಂತಿಗಾಗಿ ಇವೆಲ್ಲದರ ಬಗ್ಗೆ ಆಲೋಚನೆಯೇ ಬೇಡವೆನಿಸುತ್ತದೆ.

◆ **ಎಪ್ಪತ್ತರ ದಶಕದ ನಂತರ ಸ್ತ್ರೀವಾದವು ಜಾಗತಿಕ ನೆಲೆಯಲ್ಲಿ ಹೆಣ್ಣಿನ ರಾಜಕೀಯ ಸ್ವಾತಂತ್ರ್ಯದ ಬಗೆಗೆ, ಸಮಾನ ಅವಕಾಶಗಳ ಬಗೆಗೆ ದನಿಯೆತ್ತಿತು. ಲಿಂಗತಾರತಮ್ಯವನ್ನು ಪ್ರಶ್ನಿಸುವ ಆಲೋಚನಾಕ್ರಮಗಳು ಬೆಳೆದವು. ಹೆಣ್ತನದ ಸ್ವರೂಪದ ಬಗೆಗೆ ಮೂಲಮುಖಿಯಾಗಿ ಶೋಧಕ್ಕಿಳಿದ ಅಧ್ಯಯನಗಳು ಹೆಣ್ಣು ಸಮಾನಳು ಮಾತ್ರವಲ್ಲ, ಆಕೆ ಗಂಡಿಗಿಂತ ಭಿನ್ನ, ಭಿನ್ನತೆಯೇ ಆಕೆಯ ಶಕ್ತಿಯೂ ಹೌದು ಎಂದೂ ಹೇಳುತ್ತಿವೆ. ಈ ಭಿನ್ನತೆಯ ರಾಜಕಾರಣದ ಬಗ್ಗೆ ನಿಮಗೇನನಿಸುತ್ತದೆ?**

ಆ ದಶಕಗಳಲ್ಲಿ ಸ್ತ್ರೀವಾದ ಮಾತನಾಡಿದ ರಾಜಕೀಯ ಆಯಾಮಗಳು, ಶಿಕ್ಷಣ, ಸಮಾನತೆ,